# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 889 |
| **ಸದಸ್ಯರ ಹೆಸರು** | : | ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 11.03.2026 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಇರುವ ಒಟ್ಟು ಬಂದರು ಅಧಿಕಾರಿ ಹುದ್ದೆಗಳು ಎಷ್ಟು; ಖಾಲಿ ಇರುವ ಮತ್ತು ಭರ್ತಿ ಮಾಡಿರುವ ಹುದ್ದೆಗಳು ಎಷ್ಟು; (ವಿವರ ನೀಡುವುದು) | ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಒಟ್ಟು 03 ಬಂದರು ಅಧಿಕಾರಿ ಹುದ್ದೆಗಳು ಮಂಜೂರಾಗಿರುತ್ತವೆ. ಪ್ರಸ್ತುತ ಮಂಡಳಿಯಲ್ಲಿ 02 ಬಂದರು ಅಧಿಕಾರಿ ಹುದ್ದೆಗಳು ಖಾಲಿ ಇರುತ್ತವೆ ಹಾಗೂ 01 ಬಂದರು ಅಧಿಕಾರಿ ಹುದ್ದೆಯನ್ನು (ಕಾರವಾರ ಬಂದರು) ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿರುತ್ತದೆ. |
| ಆ) | ಬಂದರು ಅಧಿಕಾರಿ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು; | ಹೌದು.<br><br>ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಬಂದರು ಅಧಿಕಾರಿಗಳ 03 ಹುದ್ದೆಗಳು ಖಾಲಿ ಇದ್ದು, ಪರಿಶಿಷ್ಟ ಪಂಗಡದ ಬಂದರು ಅಧಿಕಾರಿ ವೃಂದದ ಬ್ಯಾಕ್ ಲಾಗ್ ಹುದ್ದೆಯನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>ಕರ್ನಾಟಕ ಜಲಸಾರಿಗೆ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು 2022ರ ಕಲಂ-19 ಮತ್ತು 20ರಲ್ಲಿ 'ಎ' & 'ಬಿ' ದರ್ಜೆಯ ಅಧಿಕಾರಿಗಳನ್ನು ನೇಮಕಾತಿ/ ನಿಯೋಜನೆ/ ಗುತ್ತಿಗೆ ಆಧಾರದ ಮೇಲೆ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಅದರಂತೆ ದಿನಾಂಕ: 23.04.2025 ರಂದು ನಡೆದ 11ನೇ ಕರ್ನಾಟಕ ಜಲಸಾರಿಗೆ ಮಂಡಳಿಯ ಸಭೆಯಲ್ಲಿ ಕಾರವಾರ/ ಮಂಗಳೂರು ಬಂದರುಗಳಿಗೆ ಬಂದರು ಅಧಿಕಾರಿಯನ್ನು ನಿಯೋಜನೆ/ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ನಿರ್ಣಯಿಸಲಾಗಿರುತ್ತದೆ.<br><br>ಆಡಳಿತಾತ್ಮಕ ಹಿತದೃಷ್ಟಿಯಿಂದ ಕರ್ನಾಟಕ ಜಲಸಾರಿಗೆ ಮಂಡಳಿಯ ಕಾರವಾರ ಬಂದರು ಕಛೇರಿಯ 01 ಬಂದರು ಅಧಿಕಾರಿ ಹುದ್ದೆಯನ್ನು ನಿಗದಿಪಡಿಸಿದ ಮಾನದಂಡಗಳನ್ವಯ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಹಾಗೂ ಬಾಕಿ ಇರುವ 02 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ. |
| ಇ) | ಬಂದರು ಅಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಇರುವ ಮಾನದಂಡಗಳೇನು; | ಕರ್ನಾಟಕ ಜಲಸಾರಿಗೆ ಮಂಡಳಿಯ ನೇಮಕಾತಿ ನಿಯಮಗಳು 2022 ರಲ್ಲಿ ಅಧಿಕಾರಿ ಹುದ್ದೆಯನ್ನು ಭರ್ತಿ |

| | | |
|---|---|---|
| | | ಮಾಡಲು ಈ ಕೆಳಕಂಡ ಅರ್ಹತೆ/ಮಾನದಂಡಗಳನ್ನು ವಿಧಿಸಲಾಗಿದೆ.<br><br>ನೇರ ನೇಮಕಾತಿಗಾಗಿ;<br><br>1. ಮರ್ಚೆಂಟ್ ಶಿಪ್ಪಿಂಗ್ ಆಕ್ಟ್, 1958 ರ ಅಡಿಯಲ್ಲಿ ನೀಡಲಾದ ಮಾಸ್ಟರ್ ಫಾರಿನ್ ಗೋಯಿಂಗ್ ಶಿಪ್ ಆಗಿ ಕಾಮನ್‌ವೆಲ್ತ್‌ನಾದ್ಯಂತ ಮಾನ್ಯತೆಯನ್ನು ಹೊಂದಿರುವ ಸಾಮರ್ಥ್ಯ ಪ್ರಮಾಣ ಪತ್ರವನ್ನು ಹೊಂದಿರಬೇಕು.<br>2. ಹಡಗಿನ ಮಾಸ್ಟರ್ ಆಗಿ ಸೇವೆ ಸಲ್ಲಿಸಿರಬೇಕು<br>3. ಕನ್ನಡಕ ಇದ್ದರು ಅಥವಾ ಇಲ್ಲದಿದ್ದರು ಈ ಕೆಳಗಿನ ದೃಶ್ಯ ಮಾನದಂಡಗಳನ್ನು ಹೊಂದಿರಬೇಕು<br><br>ಬಲಕಣ್ಣು ಎಡಕಣ್ಣು<br>ದೂರದ ದೃಷ್ಟಿ ಇನ್: 6/6 ಇನ್: 6/6<br>ಹತ್ತಿರ ದೃಷ್ಟಿ 0.6 0.6<br><br>4. ಪ್ರತೀಯೊಂದು ಕಣ್ಣಿಗು ಪೂರ್ಣ ದೃಷ್ಟಿ ಕ್ಷೇತ್ರ ಇರಬೇಕು, ಕಣ್ಣು ಕುಕ್ಕುವುದು ಅಥವಾ ಕಣ್ಣಿನ ಯಾವುದೇ ಅನಾರೋಗ್ಯಕರ ಸ್ಥಿತಿ ಅಥವಾ 02 ಕಣ್ಣಿನ ರೆಪ್ಪೆಗಳು ಅನರ್ಹತೆ ಎಂದ ಪರಿಗಣಿಸಲಾಗುತ್ತದೆ;<br><br>5. 45 ವರ್ಷ ವಯಸ್ಸನ್ನು ಮೀರಿರಬಾರದು |
| ಈ) | ರಾಜ್ಯದ ಯಾವ ಯಾವ ಬಂದರುಗಳಲ್ಲಿ ಬಂದರು ಅಧಿಕಾರಿ ಹುದ್ದೆಯನ್ನು ಮಾನದಂಡಗಳ ಪ್ರಕಾರ ಭರ್ತಿ ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು) | ದಿನಾಂಕ: 23.04.2025 ರಂದು ನಡೆದ 11ನೇ ಕರ್ನಾಟಕ ಜಲಸಾರಿಗೆ ಮಂಡಳಿಯ ಸಭೆಯ ನಿರ್ಣಯದಂತೆ ಒಂದು ವರ್ಷದ ಅವಧಿಗೆ ಓರ್ವ ಬಂದರು ಅಧಿಕಾರಿಯವರನ್ನು ವೃಂದ ಮತ್ತು ನೇಮಕಾತಿ ನಿಯಮ-2022ರ ಕಲಂ-19 ರನ್ವಯ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿರುತ್ತದೆ. |
| ಉ) | ಕಳೆದ 5 ವರ್ಷಗಳಿಂದ ತೇಲು ಜೆಟ್ಟಿಗೆ ಮಾಡಿರುವ ವೆಚ್ಚ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಕಳೆದ ಐದು ವರ್ಷಗಳಲ್ಲಿ ತೇಲುವ ಜೆಟ್ಟಿಗೆ ಮಾಡಿರುವ ವೆಚ್ಚದ ವಿವರ:-<br>1. ಉತ್ತರ ಕನ್ನಡ ಜಿಲ್ಲೆ - 179.72 ಲಕ್ಷ<br>2. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ - 79.30 ಲಕ್ಷ |
| ಊ) | ಉತ್ತರ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ತೇಲು ಜೆಟ್ಟಿಗಳನ್ನು ನಿರ್ಮಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು) | ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನಲ್ಲಿ ಕೇಂದ್ರ ಪುರಸ್ಕೃತ ಸಾಗರಮಾಲಾ ಯೋಜನೆಯಡಿಯಲ್ಲಿ ಕಾಳಿ ನದಿ ಜಲಮಾರ್ಗ ಅಭಿವೃದ್ಧಿ ಯೋಜನೆಯ ಮೊದಲನೇ ಭಾಗವಾಗಿ ರೂ.231.66 ಲಕ್ಷ ಮೊತ್ತದಲ್ಲಿ ಸದಾಶಿವಗಡದ ಹತ್ತಿರ 02 ತೇಲುವ ಜಟ್ಟಿಯನ್ನು ಅಳವಡಿಸಲಾಗಿರುತ್ತದೆ. ಇಲ್ಲಿಯವರೆಗೆ ರೂ.179.72ಲಕ್ಷ ಮೊತ್ತವನ್ನು ಪಾವತಿಸಲಾಗಿದೆ. |

IDD 14 BNS 2026

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**